**ದಿನಾಂಕಃ 20.09.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲು : ಪ್ರತಿವಾದಿಗಳ ಪರ ವಕೀಲರಿಂದಃ**

1. ನನ್ನ ಹೆಸರು ಬಾವಿ @ ಸಾಲಮನಿ ಎಂದು ಹೇಳುತ್ತಿದ್ದು ನನ್ನ ಅಜ್ಜ ಮತ್ತು ಮುತ್ತಜ್ಜನ ಕಾಲದಿಂದಲೂ ನಮ್ಮ ಮನೆತನಕ್ಕೆ ಬಾವಿ @ ಸಾಲಮನಿ ಎಂಬ ಅಡ್ಡ ಹೆಸರು ಇದ್ದ ಬಗ್ಗೆ ದಾಖಲೆಗಳನ್ನು ಹಾಜರು ಮಾಡಿದ್ದೀನಾ? ಎಂದರೆ ಮಾಡಿದ್ದೇನೆ. ಯಾವ ದಾಖಲೆ ಹಾಜರು ಮಾಡಿದ್ದೇನೆ? ಎಂದರೆ ವಂಶವೃಕ್ಷ ಮತ್ತು ನೋಟರಿ ಹಾಜರು ಮಾಡಿದ್ದೇನೆ. ನಿಪಿ 52 ವಂಶವೃಕ್ಷದ ವಿವರಗಳನ್ನು ಯಾರು ಕೊಟ್ಟರು? ಎಂದರೆ ನಾವೇ ಕೊಟ್ಟಿದ್ದೇವೆ. ಬಾವಿ @ ಸಾಲಮನಿ ಬಸವರಾಜಪ್ಪ ಎನ್ನುವವರು ವಂಶವೃಕ್ಷಕ್ಕೆ ಮಾಹಿತಿ ಕೊಟ್ಟಿದ್ದಾರೆ ಎಂದರೆ ಸರಿ. ಸದರಿ ಮಾಹಿತಿಯನ್ನು ನಾನು ದಿನಾಂಕ 15.02.2024 ರಂದು ಕೊಟ್ಟಿದ್ದೇನೆ ಎಂದರೆ ಸರಿ. ಅಷ್ಟರಲ್ಲಿ ಆಗಲೇ ಈ ದಾವೆಯನ್ನು 2021 ರಲ್ಲಿ ನಾವು ಸಲ್ಲಿಸಿದ್ದೆವು ಎಂದರೆ ಸರಿ. ನನ್ನ ಅಜ್ಜ ಮತ್ತು ಮುತ್ತಜ್ಜನನ್ನು ಬಾವಿ @ ಸಾಲಮನಿ ಎಂಬ ಅಡ್ಡ ಹೆಸರಿನಿಂದ ಕರೆಯುತ್ತಿದ್ದ ಬಗ್ಗೆ ಯಾವ ದಾಖಲೆ ಹಾಜರು ಮಾಡಿದ್ದೇನೆ? ಎಂದರೆ ನನ್ನ ಅಜ್ಜನನ್ನು ಬಾವಿ ಎಂಬ ಅಡ್ಡ ಹೆಸರಿನಿಂದ ಮಾತ್ರ ಕರೆಯುತ್ತಿದ್ದರು . ಯಾವ ಇಸವಿಯಿಂದ ನಮ್ಮ ಕುಟುಂಬಕ್ಕೆ ಬಾವಿ @ ಸಾಲಮನಿ ಎಂಬ ಅಡ್ಡ ಹೆಸರು ಬಂದಿತು? ಎಂದರೆ ನನ್ನ ತಂದೆಯ ಕಾಲದಿಂದ ಬಂದಿರುತ್ತದೆ. ನಾನು ಹಾಜರು ಮಾಡಿದ ಪಹಣಿಗಳಲ್ಲಿ 1968-69 ನೇ ಇಸವಿಯಲ್ಲಿ ಪಹಣಿಗಳು ಯಾರ ಹೆಸರಿನಲ್ಲಿ ನಮೂದಾಗಿವೆ? ಎಂದರೆ ಬಾವಿ ಲಿಂಗಪ್ಪನ ಹೆಸರಿನಲ್ಲಿ ನಮೂದಾಗಿವೆ. ಆ ಯಾವುದೇ ಪಹಣಿಗಳಲ್ಲಿ ಬಾವಿ @ ಸಾಲಮನಿ ಲಿಂಗಪ್ಪ ಎಂದು ನಮೂದಾಗಿಲ್ಲ ಎಂದರೆ ಸರಿ. ನನ್ನ ವಾದ ಪತ್ರದಲ್ಲಿ ಹರವಿ ಹನುಮಪ್ಪನ ಪೂರ್ವಜರ ಹೆಸರು ಬಾವಿ ಲಿಂಗಪ್ಪ ತಂದೆ ಗುಡ್ಡಪ್ಪ ಎಂದು ಬರೆಯಿಸಿದ್ದೇನೆ ಎಂದರೆ ನಾನು ಆ ರೀತಿ ಬರೆಯಿಸಿಲ್ಲ. ನಮ್ಮ ಪೂರ್ವಜರ ಹೆಸರು ಬಾವಿ ಲಿಂಗಪ್ಪ ತಂದೆ ದೊಡ್ಡ ನಿಂಗಪ್ಪ ಎಂದು ಬರೆಯಿಸಿದ್ದೇನೆ. ವಾದ ಪತ್ರದಲ್ಲಿ ಬಾವಿ ಲಿಂಗಪ್ಪ ತಂದೆ ಗುಡ್ಡಪ್ಪ ಮತ್ತು ಬಾವಿ ಲಿಂಗಪ್ಪ ತಂದೆ ದೊಡ್ಡ ಲಿಂಗಪ್ಪ ಈ ವ್ಯಕ್ತಿಗಳು ಬೇರೆ ಬೇರೆ ವ್ಯಕ್ತಿಗಳು ಎಂದು ಬರೆಯಿಸಿದ್ದೇನೆ ಎಂದರೆ ಸರಿ. ಬಾವಿ ಲಿಂಗಪ್ಪ ತಂದೆ ದೊಡ್ಡ ಲಿಂಗಪ್ಪ ಸುಮಾರು 50-60 ವರ್ಷಗಳ ಹಿಂದೆ ಮೃತಪಟ್ಟಿರಬಹುದು. ಬಾವಿ ಲಿಂಗಪ್ಪ ತಂದೆ ದೊಡ್ಡ ಲಿಂಗಪ್ಪ ಚುನಾವಣೆಯಲ್ಲಿ ಮತ ಹಾಕಿರಬಹುದು, ನನಗೆ ಗೊತ್ತಿಲ್ಲ. ಬಾವಿ ಲಿಂಗಪ್ಪ ತಂದೆ ದೊಡ್ಡ ಲಿಂಗಪ್ಪ ಇವರ 1968 ರಿಂದ ಇತ್ತಿಚಿನ ಮತದಾರರ ಪಟ್ಟಿಯನ್ನು ಹಾಜರು ಮಾಡಿದ್ದೀರಾ? ಎಂದರೆ ಮಾಡಿಲ್ಲ. ನಾನು ಹಲವಾರು ಬಾರಿ ಮತ ಹಾಕಿದ್ದೇನೆ. ದಾವೆಯ ಜೊತೆ ನಮ್ಮ ಮತದಾರರ ಪಟ್ಟಿಯನ್ನು ಹಾಜರು ಮಾಡಿಲ್ಲ. ನನ್ನ ಮತದಾರರ ಪಟ್ಟಿಯಲ್ಲಿ ಹೆಸರನ್ನು ಸಾಲಮನಿ ಬಸವರಾಜಪ್ಪ ಎಂದು ಬರೆಯಿಸಿದ್ದೇನೆ. ಮತದಾರರ ಪಟ್ಟಿಯಲ್ಲಿ ನನ್ನ ಹಾಗೂ ನನ್ನ ಕುಟುಂಬ ಸದಸ್ಯರ ಹೆಸರುಗಳ ಮುಂದೆ ಬಾವಿ @ ಸಾಲಮನಿ ಎಂಬ ಅಡ್ಡ ಹೆಸರು ಎಲ್ಲಿಯೂ ನಮೂದಾಗಿಲ್ಲ ಎಂದರೆ ಸರಿ. 1995 ರ ಹಡಗಲಿ ಹ್ಯಾರಡಾ ಗ್ರಾಮದ ಮತದಾರರ ಪಟ್ಟಿಯಲ್ಲಿ ನಮ್ಮ ಕುಟುಂಬ ಸದಸ್ಯರ ಹೆಸರುಗಳ ಮುಂದೆ ಸಾಲಮನಿ ಎಂದು ನಮೂದಾಗಿದೆ ಎಂದರೆ ಸರಿ. ಆ ಮತದಾರರ ಪಟ್ಟಿಯ ಕ್ರಮ ಸಂಖ್ಯೆ 95 ರಲ್ಲಿ ನಮೂದಾಗಿರುವ ಸಾಲಮನಿ ಬಸಮ್ಮ ಬಸವಣ್ಣೆಪ್ಪ ಇವರು ಯಾರು? ಎಂದರೆ ನಮ್ಮ ದೊಡ್ಡಪ್ಪ ಮತ್ತು ದೊಡ್ಡಮ್ಮ. ಆ ಕ್ರಮ ಸಂಖ್ಯೆ 95 ರಲ್ಲಿ ಹೆಸರು ನಮೂದಾದ ಗೋಣೆಪ್ಪ, ಗಂಗವ್ವ, ಹನುಮಪ್ಪ, ನಿರ್ಮಲವ್ವ ಮತ್ತು ರಾಜಪ್ಪ ಇವರೆಲ್ಲರೂ ನಮ್ಮ ಕುಟುಂಬದ ಸದಸ್ಯರು ಎಂದರೆ ಸರಿ. ಮತದಾರರ ಪಟ್ಟಿಯಲ್ಲಿ ನಮ್ಮ ಕುಟುಂಬದ ಅಡ್ಡ ಹೆಸರು ಬಾವಿ @ ಸಾಲಮನಿ ಎಂಬುದಕ್ಕೆ ಬದಲಾಗಿ ಸಾಲಮನಿ ಎಂದು ತಪ್ಪಾಗಿ ನಮೂದಾಗಿದೆ ಎಂದು ಅದನ್ನು ಸರಿಪಡಿಸಿಕೊಳ್ಳಲು ಪ್ರಯತ್ನ ಮಾಡಿದ್ದೀರಾ? ಎಂದರೆ ಮಾಡಿಲ್ಲ.

2. 1968 ಕ್ಕಿಂತ ಮುಂಚೆ ಸರ್ವೇ ಸೆಟ್ಲಮೆಂಟ್ ದಾಖಲೆಗಳಲ್ಲಿ ಯಾರ ಹೆಸರುಗಳು ನಮೂದಾಗಿದ್ದವು ಎಂಬ ಬಗ್ಗೆ ದಾಖಲೆಗಳನ್ನು ಹಾಜರು ಮಾಡಿದ್ದೀರಾ? ಎಂದರೆ ಮಾಡಿದ್ದೇನೆ.

ದಾಖಲೆ ಒದಗಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 6 ಪಹಣಿಯಲ್ಲಿ ಬಾವಿ ಲಿಂಗಪ್ಪ ಎಂದು ಹೆಸರು ನಮೂದಾಗಿದ್ದು ನಾವು ಕಂದಾಯ ಇಲಾಖೆಯಲ್ಲಿ ಅದು ತಪ್ಪಾಗಿ ನಮೂದಾಗಿದೆ ಎಂದು ಅದನ್ನು ಸರಿಪಡಿಸಿಕೊಳ್ಳಲು ಪ್ರಯತ್ನ ಮಾಡಿದ್ದುಂಟೇ? ಎಂದರೆ ನಮ್ಮ ಅಜ್ಜನ ಕಾಲದಿಂದಲೂ ನಮ್ಮ ಮನೆತನದ ಹೆಸರು ಬಾವಿ ಎಂದೇ ಇರುತ್ತದೆ. ಬಾವಿ @ ಸಾಲಮನಿ ಲಿಂಗಪ್ಪ ಎಂದು ಅದನ್ನು ತಿದ್ದುಪಡಿ ಮಾಡಿಸಲು ಪ್ರಯತ್ನ ಮಾಡಿದ್ದೀರಾ? ಎಂದರೆ ಮಾಡಿಲ್ಲ. 2014-15 ನೇ ಸಾಲಿನಲ್ಲಿ ಬಾವಿ ಹರವಿ ಹನುಮಪ್ಪನು ಸಾಲಮನಿ ಗಂಗಮ್ಮ, ಸಾಲಮನಿ ಇದಿಯಮ್ಮ, ಮಾಲವ್ವ ಚಿಕ್ಕನ್ನವರ ಮತ್ತು ತಹಶೀಲ್ದಾರರ ವಿರುದ್ಧ ಸರ್ವೇ ನಂ. 164 ಇ ಮತ್ತು ಸರ್ವೇ ನಂ. 159 ಎಫ್ ಜಮೀನುಗಳ ಕುರಿತು ಕಂದಾಯ ವ್ಯಾಜ್ಯ ಸಲ್ಲಿಸಿದ್ದರು ಎಂದರೆ ಸರಿ. ಸದರಿ ಅಪೀಲನ್ನು ನಮ್ಮ ಕುಟುಂಬದವರು ಮಾಡಿಕೊಂಡಿರುವ ಖಾತೆ ಬದಲಾವಣೆ ಸರಿಯಲ್ಲವೆಂದು ಸಲ್ಲಿಸಿದ್ದರು ಎಂದರೆ ಸದರಿ ಅಪೀಲಿನಲ್ಲಿ ಸಿವಿಲ್ ನ್ಯಾಯಾಲಯಕ್ಕೆ ಹೋಗಿ ಎಂದು ಆದೇಶ ಮಾಡಿದ್ದಾರೆ. ಸದರಿ ದಿನಾಂಕಃ 26.08.2021 ರ ಆದೇಶದಲ್ಲಿ ಎ.ಸಿ.ಯವರು ಎಂ.ಆರ್. ನಂ. 827/1984-85 ರ ಆದೇಶವನ್ನು ರದ್ದುಪಡಿಸಿ ಬಾವಿ ಲಿಂಗಪ್ಪ ಇವರ ಹೆಸರಿಗೆ ಖಾತೆ ಪುನಸ್ಥಾಪಿಸಲು ಆದೇಶ ಮಾಡಿದ್ದಾರೆ ಎಂದರೆ ಆ ರೀತಿ ಆದೇಶ ಮಾಡಿದ್ದರಿಂದಲೇ ನಾವು ಈ ದಾವೆಯನ್ನು ಸಲ್ಲಿಸಿದ್ದೇವೆ. ಎ.ಸಿ.ಯವರ ಆದೇಶದ ವಿರುದ್ಧ ನಾವು ಜಿಲ್ಲಾಧಿಕಾರಿಗಳ ಮುಂದೆ ಅಪೀಲು ಸಲ್ಲಿಸಲಿಲ್ಲವೇ? ಎಂದರೆ ಇಲ್ಲ.

3. 2014 ನೇ ಇಸವಿಯ ನಂತರದಿಂದಲೇ ನಾವು ನಮ್ಮ ಮನೆತನದ ಹೆಸರು ಬಾವಿ @ ಸಾಲಮನಿ ಎಂದು ಪ್ರತಿಪಾದನೆ ಮಾಡುತ್ತಿದ್ದೇವೆ, ಅದಕ್ಕಿಂತ ಮುಂಚೆ ನಾವು ಆ ರೀತಿ ಯಾವುದೇ ಪ್ರತಿಪಾದನೆ ಮಾಡಿರಲಿಲ್ಲ ಎಂದರೆ ಸರಿಯಲ್ಲ. 2013-14 ನೇ ಸಾಲಿನಲ್ಲಿ ನಾನು ಮತ್ತು ನನ್ನ ಕುಟುಂಬ ಸದಸ್ಯರು ಬಾವಿ ಹರವಿ ಹನುಮಪ್ಪ ತಂದೆ ನೀಲಪ್ಪ, ಕಂದಾಯ ನಿರೀಕ್ಷಕರು ಮತ್ತು ತಹಶೀಲ್ದಾರರ ವಿರುದ್ಧ ನಿಪಿ 27 ರಲ್ಲಿ ಇರುವ ಅಪೀಲನ್ನು ಸಲ್ಲಿಸಿದ್ದೆವು ಎಂದರೆ ಸರಿ. ಸದರಿ ಅಪೀಲನ್ನು ಸಲ್ಲಿಸುವಾಗ ನಮ್ಮ ಮೂಲ ಮನೆತನದ ಹೆಸರಾದ ಸಾಲಮನಿ ಎಂಬುದನ್ನು ಕೈಬಿಟ್ಟು ಬಾವಿ ಎಂಬ ಹೆಸರಿನಿಂದ ಅಪೀಲು ಸಲ್ಲಿಸಿದ್ದೇವೆ ಎಂದರೆ ಸರಿ. ದಾವಾ ಸ್ವತ್ತುಗಳು ಬಾವಿ ಲಿಂಗಪ್ಪನವರ ಹೆಸರಿನಲ್ಲಿ ಇರುವ ಕಾರಣ ಅವುಗಳನ್ನು ಹೊಡೆದುಕೊಳ್ಳಲು ನಮ್ಮ ಅಜ್ಜ ಬಾವಿ ಲಿಂಗಪ್ಪ ತಂದೆ ದೊಡ್ಡ ನಿಂಗಪ್ಪ ಎಂದು ಸುಳ್ಳು ಪ್ರತಿಪಾದನೆ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ಮೂಲತಃ ದಾವಾ ಸ್ವತ್ತುಗಳು ಬಾವಿ ಲಿಂಗಪ್ಪ ತಂದೆ ದೊಡ್ಡ ನಿಂಗಪ್ಪ ಇವರಿಗೆ ಸಂಬಂಧಪಟ್ಟ ಆಸ್ತಿಗಳೇ ಅಲ್ಲ ಎಂದರೆ ಸರಿಯಲ್ಲ. ಎಲ್ಲಾ ದಾವಾ ಸ್ವತ್ತುಗಳು ಬಾವಿ ಲಿಂಗಪ್ಪ ತಂದೆ ದೊಡ್ಡ ನಿಂಗಪ್ಪ ಇವರ ಹೆಸರಿನಲ್ಲಿ ಇದ್ದವು ಎಂಬ ಬಗ್ಗೆ ಯಾವ ದಾಖಲೆ ಹಾಜರು ಮಾಡಿದ್ದೀರಿ? ಎಂದರೆ ಪಹಣಿ, ಇ.ಸಿ., ನೋಟರಿ ಮತ್ತು ವಂಶವೃಕ್ಷ ಹಾಜರು ಮಾಡಿದ್ದೇನೆ. ನಾನು ಆ ರೀತಿ ರುಜುವಾತುಪಡಿಸುವ ಕಂದಾಯ ಇಲಾಖೆಯಿಂದ ಪಡೆದ ಯಾವುದೇ ಅಧಿಕೃತ ದಾಖಲೆಗಳನ್ನು ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಹಾಜರು ಮಾಡಿರುವ ಯಾವುದೇ ಪಹಣಿಗಳು ಬಾವಿ ಲಿಂಗಪ್ಪ ತಂದೆ ದೊಡ್ಡ ನಿಂಗಪ್ಪ ಇವರ ಹೆಸರಿನಲ್ಲಿ ನಮೂದಾಗಿಲ್ಲ ಎಂದರೆ ಪಹಣಿ ನಮೂದಾಗಿಲ್ಲ ಆದರೆ ಅವು ಸದರಿಯವರ ಆಸ್ತಿಗಳೇ ಆಗಿರುತ್ತವೆ. ಇ.ಸಿ. ಮತ್ತು ವಂಶವೃಕ್ಷದ ದಾಖಲೆಗಳು ನಾವೇ ಸ್ವತಃ ಸೃಷ್ಟಿ ಮಾಡಿರುವ ದಾಖಲೆಗಳು ಎಂದರೆ ಸರಿಯಲ್ಲ.

**(ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದರಿಂದ ಮುಂದೂಡಿತು).**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ).

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಹೂವಿನ ಹಡಗಲಿ.**